# ಮಕ್ಕಳ ಶಿಕ್ಷಣದೊಂದಿಗೆ ಚೌಕಾಸಿ!

'ಕಡ್ಡಾಯ ಶಿಕ್ಷಣ ಕಾಯ್ದೆ' ರೂಪುಗೊಂಡು ಮೂರು ವರ್ಷಗಳಾದರೂ, ಅದರ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಮುಂದಾದುದು ಇತ್ತೀಚೆಗೆ. ಕಾಯ್ದೆ ಜಾರಿಗೆ ಸ್ಪಷ್ಟ ಕ್ರಿಯಾನೀತಿಯನ್ನೇ ರೂಪಿಸದ ಸರ್ಕಾರ, 'ಆರ್‌ಟಿಇ' ವ್ಯಾಪ್ತಿಯಿಂದ ಹೊರಗುಳಿಯಲು ಬಯಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುವಂತೆ ವರ್ತಿಸುತ್ತಿದೆ. ಇದರಿಂದಾಗಿ ನಾಡಿನ ಎಲ್ಲ ಮಕ್ಕಳನ್ನು ಶಾಲೆಗಳ ತೆಕ್ಕೆಗೆ ಕೊಂಡೊಯ್ಯುವ ಕುರಿತಂತೆ ಸರ್ಕಾರಕ್ಕಿರುವ ನಿರ್ಲಕ್ಷ್ಯ ಎದ್ದು ಕಾಣುವಂತಿದೆ.

'ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ' (ಆರ್‌ಟಿಇ) ಅಡಿಯಲ್ಲಿ ಶಾಲೆಗಳನ್ನು ನೋಂದಾಯಿಸಿಕೊಳ್ಳಲು ನೀಡಲಾಗಿದ್ದ ಅ.31ರ ಗಡುವನ್ನು ರಾಜ್ಯ ಸರ್ಕಾರ ವಿಸ್ತರಿಸಿದೆ. ಈ ಮೂಲಕ, ನಾಡು ನುಡಿಯ ಹಿತಾಸಕ್ತಿ ರಕ್ಷಣೆಗೆ ತಾನು ಕಟಿಬದ್ಧ ಎನ್ನುವ ಸರ್ಕಾರದ ಮಾತು ಬೂಟಾಟಿಕೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಜನಪರ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಸರ್ಕಾರಕ್ಕಿರುವ ಇಚ್ಛಾಶಕ್ತಿಯ ಕೊರತೆಗೂ ಇದು ನಿದರ್ಶನವಾಗಿದೆ.

ದೇಶದ ಎಲ್ಲ ಮಕ್ಕಳಿಗೂ ಕಡ್ಡಾಯ ಹಾಗೂ ಉಚಿತ ಶಿಕ್ಷಣ ಒದಗಿಸುವ ಮಹತ್ವಾಕಾಂಕ್ಷೆಯ 'ಕಡ್ಡಾಯ ಶಿಕ್ಷಣ ಕಾಯ್ದೆ' (2009) ರೂಪುಗೊಂಡು ಮೂರು ವರ್ಷಗಳಾದರೂ, ಅದರ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಮುಂದಾದುದು ಇತ್ತೀಚೆಗೆ. ಆದರೆ, ಕಾಯ್ದೆಯ ಜಾರಿಗೆ ಸ್ಪಷ್ಟ ಕ್ರಿಯಾನೀತಿಯನ್ನೇ ರೂಪಿಸದ ಸರ್ಕಾರ, 'ಆರ್‌ಟಿಇ' ವ್ಯಾಪ್ತಿಯಿಂದ ಹೊರಗುಳಿಯಲು ಬಯಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗುವಂತೆ ವರ್ತಿಸುತ್ತಿದೆ. ಇದರಿಂದಾಗಿ ನಾಡಿನ ಎಲ್ಲ ಮಕ್ಕಳನ್ನು ಶಾಲೆಗಳ ತೆಕ್ಕೆಗೆ ಕೊಂಡೊಯ್ಯುವ ಕುರಿತಂತೆ ಸರ್ಕಾರಕ್ಕಿರುವ ನಿರ್ಲಕ್ಷ್ಯ ಎದ್ದು ಕಾಣುವಂತಿದೆ.

ಮಕ್ಕಳ ಕಲಿಕೆಯ ಹಕ್ಕಿನೊಂದಿಗಿನ ಚೌಕಾಸಿ ಹೊಸತೇನಲ್ಲ. ಇದೇ ಸರ್ಕಾರ ಕಡಿಮೆ ಮಕ್ಕಳಿರುವ ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಹೊರಟಿತ್ತು. ಕಡಿಮೆ ಮಕ್ಕಳಿರುವ ಶಾಲೆಯ ಅಭಿವೃದ್ಧಿಯ ಜವಾಬ್ದಾರಿಯನ್ನು ಆಸಕ್ತರಿಗೆ ದತ್ತು ನೀಡುವ ಸರ್ಕಾರದ ನಿಲುವೂ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನವೇ ಆಗಿದೆ. ನಾಡಿನ ವಿವಿಧ ಭಾಗಗಳ ಒಂದು ಲಕ್ಷಕ್ಕೂ ಹೆಚ್ಚು ಮಕ್ಕಳು ಶಾಲೆಗಳಿಂದ ಹೊರಗೆ ಉಳಿದಿರುವ ಸಂದರ್ಭದಲ್ಲಿ, 'ಆರ್‌ಟಿಇ' ಜಾರಿ ಕುರಿತ ವಿಳಂಬ ಧೋರಣೆ ಮಕ್ಕಳಿಗೆ ಮಾಡುತ್ತಿರುವ ಮೋಸವಲ್ಲದೆ ಬೇರೇನೂ ಅಲ್ಲ. 'ಆರ್‌ಟಿಇ' ಅಡಿ ನೋಂದಣಿಗೊಳ್ಳದ ಶಾಲೆಗಳ ಪರವಾನಗಿಯನ್ನು ರದ್ದುಗೊಳಿಸುವ ಕುರಿತ ಸರ್ಕಾರದ ಮಾತು ಬೆದರುಗೊಂಬೆಯಂತಿದೆ.

ಖಾಸಗಿ ಶಾಲೆಗಳಿಗೆ 'ಆರ್‌ಟಿಇ' ಅಂಕುಶದಂತೆ ಕಾಣಿಸುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಗುಣಮಟ್ಟದ ಶಿಕ್ಷಣ, ಜಾತಿ–ಧರ್ಮದ ಹೆಸರಿನಲ್ಲಿ ಪ್ರವೇಶ ನಿರಾಕರಣೆ, ಪ್ರವೇಶ ಪರೀಕ್ಷೆ ಮತ್ತು ಟ್ಯೂಷನ್ ನಿಷೇಧ, ಶೇ. 25ರಷ್ಟು ಬಡ ವಿದ್ಯಾರ್ಥಿಗಳಿಗೆ ಕಡ್ಡಾಯ ಉಚಿತ ಪ್ರವೇಶ ಸೇರಿದಂತೆ 'ಆರ್‌ಟಿಇ'ಯ ಲಕ್ಷ್ಮಣರೇಖೆಗಳಿಗೆ ಬದ್ಧವಾಗುವುದು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಲಾಭದಾಯಕವಲ್ಲ. ಪ್ರಸ್ತುತ, 'ಆರ್‌ಟಿಇ' ಕುರಿತಂತೆ ಈ ಸಂಸ್ಥೆಗಳು ಎತ್ತುತ್ತಿರುವ ತಕರಾರುಗಳಲ್ಲಿ ವ್ಯಾಪಾರಿ ಉದ್ದೇಶಗಳು ಸ್ಪಷ್ಟವಾಗಿವೆ. 1983ರ 'ಕರ್ನಾಟಕ ಶಿಕ್ಷಣ ಕಾಯ್ದೆ' ಅಡಿ ಈಗಾಗಲೇ ನೋಂದಾಯಿಸಿಕೊಂಡಿರುವುದರಿಂದ 'ಆರ್‌ಟಿಇ' ಅಗತ್ಯವಿಲ್ಲ ಎನ್ನುವ ವಾದ ಹಾಗೂ 'ಆರ್‌ಟಿಇ' ಅಗತ್ಯಗಳನ್ನೆಲ್ಲ 'ಕರ್ನಾಟಕ ಶಿಕ್ಷಣ ಕಾಯ್ದೆ' ಪೂರೈಸುತ್ತದೆ ಎನ್ನುವ ಮಾತು ರಂಗೋಲಿ ಕೆಳಗೆ ತೂರುವ ಜಾಣತನದ್ದು.

'ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಗೊಂದಲಗಳಿವೆ. ಈ ಕಾಯ್ದೆ ಜಾರಿಯ ವೇಳೆ ಅಲ್ಪಸಂಖ್ಯಾತ ಶಾಲೆಗಳನ್ನು ಗುರುತಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು 'ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ' (ಕುಸ್ಮಾ) ತಕರಾರು ಎತ್ತಿದೆ. ಆದರೆ, ಈ ಗೊಂದಲಗಳನ್ನು ಮಾತುಕತೆಯ ಮೂಲಕ ತಿಳಿಗೊಳಿಸಿಕೊಳ್ಳುವ ಪ್ರಯತ್ನಗಳಿಗೆ ಅದು ಮುಂದಾಗಿಲ್ಲ. ಈ ನಿಟ್ಟಿನಲ್ಲಿ ಸರ್ಕಾರಕ್ಕೂ ಆಸಕ್ತಿಯಿಲ್ಲ. ಸಮಸ್ಯೆಯನ್ನು ಮುಂದುವರಿಸುವುದು ಉಭಯತ್ರರಿಗೂ ಲಾಭದಾಯಕ ಆದಂತಿದೆ.

ಮಕ್ಕಳ ನಡುವೆ ತಾರತಮ್ಯ ತೋರಬಾರದು ಎಂದು ಸ್ಪಷ್ಟವಾಗಿ ಹೇಳಿರುವ ಸುಪ್ರೀಂ ಕೋರ್ಟ್, ಖಾಸಗಿ ಶಾಲೆಗಳಲ್ಲಿ ಶೇಕಡಾ 25 ಬಡಮಕ್ಕಳಿಗೆ ಕಡ್ಡಾಯ ಪ್ರವೇಶ ನೀಡಬೇಕು ಎನ್ನುವ ಮಾತಿಗೆ ಅಡಿಗೆರೆ ಎಳೆದಿದೆ. ಆದರೆ, ಈ ಆದೇಶವನ್ನು ಜಾರಿಗೆ ತರಬೇಕಾಗಿದ್ದ ರಾಜ್ಯ ಸರ್ಕಾರ, ಕಾಯ್ದೆ ಜಾರಿಗೆ ವಿಳಂಬ ನೀತಿ ಅನುಸರಿಸುತ್ತಿದೆ. 'ಆರ್‌ಟಿಇ' ವಿರುದ್ಧ ಇರುವ ಶಾಲೆಗಳ ಆಡಳಿತ ಮಂಡಳಿಗಳಲ್ಲಿ ಸರ್ಕಾರದಲ್ಲಿರುವ ಅಧಿಕಾರಸ್ಥರು ಮತ್ತು ಆಡಳಿತ ಪಕ್ಷದ 'ಜುಟ್ಟು' ಹಿಡಿದವರೇ ಇರುವುದು ಗುಟ್ಟೇನಲ್ಲ. ಇವರಿಗೆ ಅನುಕೂಲ ಮಾಡಿಕೊಡುವ ಭರದಲ್ಲಿ ಮಕ್ಕಳ ಭವಿಷ್ಯದೊಂದಿಗೆ ಸರ್ಕಾರ ಚೆಲ್ಲಾಟ ಆಡುತ್ತಿದೆ.

ನಗರ ಪ್ರದೇಶಗಳ ಪ್ರತಿಷ್ಠಿತ ಶಾಲೆಗಳಲ್ಲಿ ಮಕ್ಕಳ ನೋಂದಣಿ ಚಟುವಟಿಕೆಗಳು ಆರಂಭಗೊಳ್ಳುವ ಸಂದರ್ಭದಲ್ಲೇ 'ಆರ್‌ಟಿಇ' ಅಡಿ ನೋಂದಾಯಿಸಿಕೊಳ್ಳಲು ಶಾಲೆಗಳಿಗೆ ನೀಡಲಾಗಿದ್ದ ಗಡುವನ್ನು ಸರ್ಕಾರ ಮುಂದೂಡಿದೆ. ಇದರರ್ಥ ಸರಳವಾಗಿದೆ. ವಿದ್ಯಾರ್ಥಿಗಳ ದಾಖಲಾತಿ ಪ್ರಕ್ರಿಯೆ ಮುಗಿದಿದೆ ಎನ್ನುವ ಕಾರಣ ನೀಡಿ, ಯಥಾಸ್ಥಿತಿಯನ್ನು ಮತ್ತೊಂದು ವರ್ಷ ಮುಂದುವರೆಸುವುದು. ಇದರಿಂದಾಗಿ, ಉಚಿತ ಮತ್ತು ಕಡ್ಡಾಯ ಶಿಕ್ಷಣ ಎನ್ನುವುದು ಮತ್ತೊಂದು ವರ್ಷ ಘೋಷಣೆಯಾಗಿಯೇ ಉಳಿಯಲಿದೆ.

■ ರಘುನಾಥ ಚ.ಹ.




ಅಭಿಜಿತ್.ಜೆ.ಕೆ